# ಪ್ರವಾಸ



'ಐರನ್‌ಲೇಡಿ' ಐಫೆಲ್ ಟವರ್ 2

## ನೀವೂ ಬರೆಯಿರಿ

ನೀರಸ ಬದುಕಿಗೆ ರಸ ತುಂಬುವ ಪ್ರವಾಸದ ಅನುಭವಗಳು ನಿಮ್ಮಲ್ಲಿ ದಟ್ಟೈಸಿವೆಯೇ? ನಿಮ್ಮ ಪ್ರವಾಸದ ಅನುಭವಗಳಿಗೆ ಅಕ್ಷರರೂಪ ನೀಡುವ ತುಡಿತ ನಿಮ್ಮಲ್ಲಿದೆಯೇ? ಇಲ್ಲಿದೆ ಅವಕಾಶ. ಪ್ರವಾಸಿ ತಾಣಗಳ ಪರಿಚಯ ಹಾಗೂ ಅನುಭವ ಹಂಚಿಕೆಗಾಗಿಯೇ 'ಪ್ರವಾಸ' ಪುರವಣಿಯನ್ನು ನೀಡಲಾಗುತ್ತಿದೆ. ಹೊಸ ಹೊಸ ಪ್ರವಾಸಿ ತಾಣಗಳ ಕುರಿತೂ ಬರೆಯಬಹುದು. ಗುಣಮಟ್ಟದ ಚಿತ್ರಗಳಿಗೆ ಆದ್ಯತೆ. ಬರಹಗಳನ್ನು ನುಡಿ ಅಥವಾ ಬರಹ ತಂತ್ರಾಂಶಗಳಲ್ಲಿ ಟೈಪ್ ಮಾಡಿ ಕಳುಹಿಸಿ.
ಇಮೇಲ್ ವಿಳಾಸ: **pravasa@prajavani.co.in**



ತಾರ್ಸರ್ ಸರೋವರ

### ಕಾಶ್ಮೀರದ ಸರೋವರಗಳತ್ತ ಚಾರಣ

# ತಾರ್ಸರ್–ಮಾರ್ಸರ್

ಉಷಾ ಕಟ್ಟೆಮನೆ

ಗೂಗಲ್, ಯೂಟ್ಯೂಬ್‌ನಲ್ಲಿ ಕಾಶ್ಮೀರದ ಕಡುನೀಲ ಸರೋವರಗಳ ಮೋಹಕ ಸೌಂದರ್ಯವನ್ನು ಕಂಡಾಗಲೆಲ್ಲ ಅಲ್ಲಿಗೊಮ್ಮೆ ಹೋಗಬೇಕೆಂದು ಮನಸ್ಸು ಹುಚ್ಚೆದ್ದು ಕುಣಿಯುತ್ತಿತ್ತು. ಆದರೆ ಕಾಶ್ಮೀರದಲ್ಲಿನ ದೊಂಬಿ, ಗಲಾಟೆ, ಸೈನ್ಯದ ಕಟ್ಟೆಚ್ಚರಗಳ ಬಗ್ಗೆ ಕೇಳಿದ್ದಾಗ, ಮನದಲ್ಲಿ ಸಣ್ಣ ಆತಂಕ ಮೂಡುತ್ತಿತ್ತು. ಆದರೆ 'ಇಂಡಿಯಾ ಹೈಕ್' (India hikes) ಎಂಬ ಚಾರಣ ಸಂಸ್ಥೆ ತುಂಬಾ ಕಾಳಜಿ ಎಚ್ಚರಿಕೆಗಳಿಂದ ತನ್ನ ಚಾರಣಿಗರ ಯೋಗ ಕ್ಷೇಮ ನೋಡಿಕೊಳ್ಳುತ್ತದೆ' ಎಂದು ನನ್ನ ಸಹಚಾರಣಿಗರೊಬ್ಬರು ಹೇಳಿದ ಕಾರಣದಿಂದ ಅವರ ವೆಬ್‌ಸೈಟ್‌ಗೆ ಹೋಗಿ ಹೆಸರು ನೊಂದಾಯಿಸಿಕೊಂಡೆ. ಚಾರಣದ ಅನುಭವವಿದ್ದ ನಾನು ಆಯ್ದುಕೊಂಡದ್ದು ಮಾಡರೇಟ್ ತಾರ್ಸರ್–ಮಾರ್ಸರ್ ಚಾರಣವನ್ನು. ಈ ಜಾಗ ಜಮ್ಮುಕಾಶ್ಮೀರ ರಾಜ್ಯದ ಅನಂತನಾಗ್ ಜಿಲ್ಲೆಯಲ್ಲಿದೆ.



ತಾರ್ಸರ್ ಮಾರ್ಸರ್ ಚಾರಣದ ಅವಧಿ 7 ದಿನಗಳು. ಇದು ಹೈ ಅಲ್ಟಿಟ್ಯೂಡ್ ಟ್ರೆಕ್ ತಾಣ. ಅಂದರೆ 'ಆಮ್ಲಜನಕದ ಪ್ರಮಾಣ ಕಡಿಮೆ ಇರುವ ಎತ್ತರದ ಪ್ರದೇಶಕ್ಕೆ ಚಾರಣ ಹೋಗುವುದು' ಎಂದರ್ಥ. ಅಲ್ಲಿ ಜನವಸತಿ ಇರುವುದಿಲ್ಲ. ಬೇಸಿಗೆಯ ಒಂದೆರಡು ತಿಂಗಳು ಅಲೆಮಾರಿ ಕುರಿಗಾಹಿಗಳು (ಬಕ್ರೆವಾಲಿಗಳು) ಬಿಟ್ಟರೆ ಮಾನವ ಸಂಚಾರವಿರುವುದಿಲ್ಲ. ಇಂಥ ಪ್ರದೇಶಗಳಿಗೆ ಹೋಗುವಾಗ ಅನೇಕ ರೀತಿಯ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು. ಅದಕ್ಕಾಗಿಯೇ ಚಾರಣಕ್ಕೆ ಹೆಸರು ನೊಂದಾಯಿಸಿಕೊಂಡ ಮೇಲೆ ಆಯೋಜಕರು ಮೂರು ತಿಂಗಳ ಕಾಲ ಆಗಾಗ ನಮ್ಮ ಫಿಟ್ನೆಸ್ ಬಗ್ಗೆ ಮಾಹಿತಿ ಪಡೆಯುತ್ತಾರೆ.

ಚಾರಣ ಅಂದರೆ ನಡಿಗೆಯ ಪ್ರವಾಸ. ತಂಡದ ಸದಸ್ಯರೆಲ್ಲ ಒಟ್ಟಾಗಲು, ತಮ್ಮ ಸಾಮಾನು ಸರಂಜಾಮುಗಳನ್ನು ಒಂದೆಡೆ ಇಡಲು ಬೇಕಾದ ನಿರ್ದಿಷ್ಟ ಜಾಗವೇ ಬೇಸ್ ಕ್ಯಾಂಪ್. ತಾರ್ಸರ್ ಮಾರ್ಸರ್ ಚಾರಣದ ಬೇಸ್ ಕ್ಯಾಂಪ್ ಹೆಸರು ಅರು. ಅದೊಂದು ಪುಟ್ಟ ಕಣಿವೆಯ ಊರು. ಜಮ್ಮು ಕಾಶ್ಮೀರದ ರಾಜಧಾನಿ ಶ್ರೀನಗರದಿಂದ 102 ಕಿಮೀ ದೂರದಲ್ಲಿದೆ. ಇಲ್ಲಿಗೆ ರಸ್ತೆ ಕೊನೆಯಾಗುತ್ತದೆ. ಆಮೇಲೆ ಚಾರಣದ ಏರು ಹಾದಿ ಆರಂಭವಾಗುತ್ತದೆ.

ಶ್ರೀನಗರದ ವಿಮಾನ ನಿಲ್ದಾಣದಲ್ಲಿ ಇಂಡಿಯನ್ ಹೈಕ್ ಸಂಸ್ಥೆಯ ಕಾರು ನಮಗಾಗಿ ಕಾಯುತ್ತಿತ್ತು. ಆ ದಿನ ಕಾಶ್ಮೀರ್ ಬಂದ್ ಇದ್ದ ಕಾರಣದಿಂದಾಗಿ ನೇರವಾಗಿ ಅವರ ಕಚೇರಿಗೆ ಕರೆದೊಯ್ದು ನಮ್ಮ ಪರಿಚಯ ಪತ್ರ ತೋರಿಸಿ ಹೆಸರು ನೊಂದಾಯಿಸಿಕೊಂಡರು. ಅದೇ ಗಾಡಿಯಲ್ಲಿ ಅರು ವ್ಯಾಲಿಗೆ ನಮ್ಮನ್ನು ಸುರಕ್ಷಿತವಾಗಿ ತಂದು ಬಿಟ್ಟರು. ಆಗಸ್ಟ್ ತಿಂಗಳ ಕೊನೆಯ ವಾರವಾದ್ದರಿಂದ ಶ್ರೀನಗರದಲ್ಲಿ ಸೆಕೆ. ಆದರೆ ಅರುವಿಗೆ ಬಂದಾಗ ತಾಪಮಾನ 7 ಡಿಗ್ರಿ ಸೆ. ಆ ರಾತ್ರಿ ಬಿಸಿ ನೀರಿನ ಸ್ನಾನ. ಒಳ್ಳೆಯ ಊಟ ಮತ್ತು ಬೆಚ್ಚನೆಯ ಹಾಸಿಗೆಯಲ್ಲಿ ಮಲಗಿ ನಿದ್ರಿಸಿದೆವು. ಮುಂದಿನ ಐದು ದಿನಗಳ ಟೆಂಟ್ ವಾಸದಲ್ಲಿ ಇದ್ಯಾವುದೂ ಸಿಗುವುದಿಲ್ಲ ಎಂಬುದು ನಮಗೆ ಗೊತ್ತಿತ್ತು.

ಮರುದಿನ ಬೆಳಿಗ್ಗೆ ಆ ಚಳಿಯಲ್ಲಿ ಸೂರ್ಯೋದಯಕ್ಕೆ ಮುನ್ನವೇ ಎದ್ದು ಬೆಚ್ಚನೆಯ ಉಡುಪುಗಳನ್ನು ಧರಿಸಿ, ಒಂದಿಷ್ಟು ಒಣ ಹಣ್ಣುಗಳನ್ನು ತುಂಬಿಕೊಂಡು ಟ್ರೆಕ್ಕಿಂಗ್ ಪೋಲ್ ಊರಿಕೊಂಡು ಹೊರಟು ಬಿಟ್ಟೆವು. ಅಲ್ಲಿಂದ ಹತ್ತು ಕಿ.ಮೀ ದೂರದಲ್ಲಿರುವ ಲಿಡ್ಡರ್ ನದಿಯ ದಂಡೆಯ ಮೇಲೆ ನಮ್ಮ ಎರಡನೆಯ ಕ್ಯಾಂಪ್. ನಮಗೆ ಬುತ್ತಿ ಕಟ್ಟಿಕೊಟ್ಟಿದ್ದರು. ಆ ಹಾದಿಯ ಕಠಿಣತೆಯನ್ನು ಕ್ರಮಿಸುತ್ತಿರುವಾಗಲೇ ಯಾಕಾದರೂ ಈ ಟ್ರೆಕ್ಕಿಂಗ್ ಬಂದೆನಪ್ಪಾ ಅನ್ನಿಸಿತ್ತು.

ನಮ್ಮ ಮೂರನೆಯ ಕ್ಯಾಂಪ್ ಇಲ್ಲಿಂದ ಐದೂವರೆ ಕಿ.ಮೀ ದೂರದಲ್ಲಿನ ಶೇಕ್ವಾಸ್ ಎಂಬಲ್ಲಿತ್ತು. ಬೆಳಿಗ್ಗೆ ಎಳು ಗಂಟೆಗೆ ಲಿಡ್ಡರ್ ನದಿ ದಂಡೆಯಿಂದ ಹೊರಟವರು ಅಲ್ಲಿಗೆ ತಲುಪಿದಾಗ ಮಧ್ಯಾಹ್ನ 2 ಗಂಟೆಯಾಗಿತ್ತು. ನಾಲ್ಕನೆಯ ಕ್ಯಾಂಪ್ ನಮ್ಮೆಲ್ಲರ ಕನಸಿನ ಗುರಿಯಾಗಿದ್ದ ತಾರ್ಸರ್ ಸರೋವರದ ದಂಡೆಯ ಮೇಲಿತ್ತು. 11039 ಅಡಿಯಿಂದ 12449 ಅಡಿ ಎತ್ತರವನ್ನು ನಾವು ಏರಬೇಕಾಗಿತ್ತು. ಐದು ಕಿ.ಮೀ. ಹಾದಿ ಕ್ರಮಿಸಲು ನಾವು ತೆಗೆದುಕೊಂಡ ಸಮಯ ಆರು ಗಂಟೆ. ಸುಮಾರು ಎರಡು ಕಿ.ಮೀ ಸುತ್ತಳತೆಯ ಪುಟ್ಟ ಸರೋವರವದು. ಸಮತಳದಲ್ಲಿ ನಿಂತು ನೋಡಿದರೆ ನಿಶ್ಚಲ ಸಲಿಲ. ಆದರೆ ಅದರಿಂದ ಒಂದು ಸಾವಿರ ಅಡಿ ಎತ್ತರದಿಂದ ನೋಡಿದರೆ ನೀಲ ಆಕಾಶವೇ ಬೋರಲು ಬಿದ್ದಂತೆ ಕಾಣುವ ರಮ್ಯ ನೋಟ. ಹೇಗಪ್ಪಾ ಈ ಪರ್ವತ ಹತ್ತಿ ಆ ಕಡೆಗೆ ಹೋಗುವುದು ಎಂದು ನಾನು ಬೆಚ್ಚಿಬಿದ್ದಿದ್ದೆ. ಏಕೆಂದರೆ ಪರ್ವತದ ಆ ಕಡೆಗಿತ್ತು ಮಾರ್ಸರ್ ಸರೋವರ. ಕೊನೆಗೂ ಟ್ರೆಕ್ ಲೀಡರ್ ಸಲಹೆಯಂತೆ ಇರುವೆ ಹೆಜ್ಜೆಯನ್ನಿಕ್ಕುತ್ತಾ, ಟ್ರೆಕ್ಕಿಂಗ್ ಪೋಲ್ ಮೇಲೆ ದೇಹದ ಭಾರ ಹಾಕುತ್ತಾ ಪರ್ವತದ ಶಿಖರವನ್ನು ಹತ್ತಿ 'ಅಭಿನಂದನೆಗಳು' ಎಂದು ಪರಸ್ಪರ ಹೇಳಿಕೊಂಡಾಗ ಪಟ್ಟ ಶ್ರಮವೆಲ್ಲಾ ಸಾರ್ಥಕವೆನಿಸಿತ್ತು. ಸುತ್ತ 360 ಡಿಗ್ರಿಯಲ್ಲಿರುವ ಪರ್ವತಗಳೆಲ್ಲಾ ನಮ್ಮ ಕಾಲಬುಡದಲ್ಲಿದ್ದವು!

ಅಲ್ಲಿಂದ ಕಠಿಣವಾದ ಇಳಿಜಾರಿನ ಹಾದಿ. ಮತ್ತೆ ಪುನಃ ಏರು ಹಾದಿ. ಹೀಗೆ ಸಾಗುತ್ತಾ ಬಂದು ನಾವು ಕ್ಯಾಂಪ್ ಹೂಡಿದ್ದು ಸುಂದರ್ಸಾರ್ ಎಂಬ ಇನ್ನೊಂದು ಸರೋವರದ ಪಕ್ಕ. ಈ ಸರೋವರದ ಆಚೆ ಮತ್ತೊಂದು ಸರೋವರವಿತ್ತು. ಅದೇ ನಮ್ಮ ಕನಸಿನ ಮಾರ್ಸರ್ ಸರೋವರ. ನಾವು ಆ ಸರೋವರವನ್ನು ನೋಡಿ ಮತ್ತೆ ಇಲ್ಲಿಗೇ ಬರಬೇಕಾಗಿತ್ತು. ಆಗ ದಣಿದಿದ್ದರೂ, ನಮ್ಮ ಟ್ರೆಕ್ ಲೀಡರ್ ಯಶ್ ಜ್ಯೂಸ್ ನೀಡಿ ನಮ್ಮನ್ನು ಹೊರಡಿಸಿಕೊಂಡು ಹೊರಟೇ ಬಿಟ್ಟರು. ಮಾರ್ಸರ್ ನದಿ ದಂಡೆಯಲ್ಲಿ ರಾತ್ರಿ ಕಳೆಯುವುದು ಅಪಾಯಕಾರಿ ಎಂಬ ನಂಬುಗೆಯಿಂದ ಈ ಗಡಿಬಿಡಿಯ ತೀರ್ಮಾನ.

ರಾತ್ರಿಯ ನೀರವತೆಯನ್ನು ಅನುಭವಿಸಲು ಇಂಥ ಚಾರಣಗಳಿಗೇ ಬರಬೇಕು. ಶುಭ್ರ ಆಕಾಶ, ಸ್ಪಷ್ಟವಾಗಿ ಆಕಾಶಗಂಗೆಯನ್ನು ನೋಡಬಹುದು. ನಕ್ಷತ್ರಪುಂಜಗಳನ್ನು ಗುರುತಿಸಬಹುದು. ಉಲ್ಕಾಪಾತವನ್ನು ನೋಡಿ ಖುಷಿಯಿಂದ ಚಪ್ಪಾಳೆ ತಟ್ಟಿ ಕುಣಿಯಬಹುದು. ನಮ್ಮಲ್ಲಿ ಉತ್ತಮ ಕ್ಯಾಮೆರಾ ಇದ್ದವರೆಲ್ಲಾ ಆಕಾಶಗಂಗೆಯನ್ನು ಸೆರೆ ಹಿಡಿದರು. ಬೆಳದಿಂಗಳಲ್ಲಿ ಹೊಳೆಯುತ್ತಿದ್ದ ಗಿರಿಶಿಖರಗಳ ಸೌಂದರ್ಯವನ್ನು ಕ್ಯಾಮೆರಾ ಲೆನ್ಸ್‌ಗಿಳಿಸಿದರು. ರಾತ್ರಿ ಹಿಮಪಾತದ ನಡುವೆಯೂ ಕೆಲವರು ಆ ದಿವ್ಯ ಸೌಂದರ್ಯದ ಅನುಭೂತಿಗಾಗಿ ಬಹಳ ಹೊತ್ತನ್ನು ಟೆಂಟ್‌ನ ಹೊರಗೇ ಕಳೆದಿದ್ದೆವು.

ಈ ಚಾರಣದಲ್ಲಿ ನನಗೆ ತುಂಬಾ ಇಷ್ಟವಾದ ಅಂಶ ಚಾರಣದ ಆಯೋಜಕರು ಚಾರಣಿಗರ ಸುರಕ್ಷತೆಯ ಬಗ್ಗೆ ತೆಗೆದುಕೊಂಡ ಕಾಳಜಿ. 22 ಮಂದಿ ಚಾರಣಿಗರ ವಸತಿ ಮತ್ತು ಊಟದ ವ್ಯವಸ್ಥೆಗಾಗಿ 18 ಕುದುರೆಗಳ ಮೇಲೆ ಸಾಮಾನು ಹೊತ್ತು ತಂದಿದ್ದರು. ಏರು ಹಾದಿಯಾದ ಕಾರಣ ಅವುಗಳ ಬೆನ್ನ ಮೇಲೆ 15ಕೆ.ಜಿಗಿಂತ ಹೆಚ್ಚು ಭಾರ ಹೊರಿಸುತ್ತಿರಲಿಲ್ಲ. ಆರೋಗ್ಯ ತೊಂದರೆಯಾದರೆ ಚಿಕಿತ್ಸೆ ನೀಡಲು ಅಂಬುಲೆನ್ಸ್ ಜತೆಗಿರುತ್ತಿತ್ತು. ಮಧ್ಯದಲ್ಲಿ ಒಬ್ಬ ಆಕ್ಸಿಜನ್ ಸಿಲಿಂಡರ್ ಅನ್ನು ಹೊತ್ತು ಬರುತ್ತಿದ್ದ. ಇದರ ಜವಾಬ್ದಾರಿ ಫಾರೂಕನದು. ಆತ ಕಾಶ್ಮೀರದ ಕಥೆ ಹೇಳುತ್ತಿದ್ದ. 'ನಿಮ್ಮಂಥವರು ಆಗಾಗ ಇಲ್ಲಿಗೆ ಬರುತ್ತಿದ್ದರೆ ನಮಗೆ ಎರಡು ಹೊತ್ತು ಊಟ ಸಿಗುತ್ತದೆ' ಎಂದು ಭಾವುಕವಾಗಿ ಹೇಳಿದ್ದ.

ಹೈ ಅಲ್ಟಿಟ್ಯೂಡ್ ಟ್ರೆಕ್ಕಿಂಗ್‌ನಲ್ಲಿ ತಲೆನೋವು ಸಾಮಾನ್ಯ. ಇದು ಕಾಣಿಸಿಕೊಂಡರೆ ಬೇಸ್ ಕ್ಯಾಂಪಿನಲ್ಲೇ ಡೈಮೊಕ್ಸ್ ಎಂಬ ಮಾತ್ರೆ ಕೊಡುತ್ತಾರೆ. ಯಥೇಚ್ಛ ನೀರು ಕುಡಿಯಲು ಹೇಳುತ್ತಾರೆ. ಅನಂತರದಲ್ಲಿಯೂ ವಾಂತಿ–ಬೇಧಿ ಶುರುವಾದರೆ ಅಂಬ್ಯುಲೆನ್ಸ್ ಕುದುರೆಯ ಮೇಲೆ ಬೇಸ್ ಕ್ಯಾಂಪಿಗೆ ಕರೆತಂದು ಚಿಕಿತ್ಸೆ ಕೊಡುತ್ತಾರೆ. ಇನ್ನೂ ಹೆಚ್ಚಿನ ಚಿಕಿತ್ಸೆ ಬೇಕಾಗಿದ್ದರೆ ಅಂತವರನ್ನು ಫೆಹಲ್ಗಾಂವ್‌ನ ಆಸ್ಪತ್ರೆಗೆ ದಾಖಲಿಸುತ್ತಾರೆ. ನನ್ನ ಜೊತೆಯಲ್ಲಿದ್ದ ನಾಲ್ಕು ಮಂದಿ ಬೇಸ್ ಕ್ಯಾಂಪ್‌ಗೆ ಹಿಂದಿರುಗಿದ್ದರು. ಇವೆಲ್ಲದರ ನಡುವೆಯೂ ನೆನಪಿನಲ್ಲಿ ಉಳಿಯುವ ಚಾರಣವಿದು.

(ಚಿತ್ರಗಳು: ಲೇಖಕರವು)

### ಸರೋವರಗಳ ಕಥೆ

ತಾರ್ಸರ್ ಸರೋವರ ದೈವಶಕ್ತಿಯುಳ್ಳದ್ದು. ಮಾರ್ಸರ್ ದುಷ್ಟ ಶಕ್ತಿಗಳು ಆವರಿಸಿಕೊಂಡಿರುವ ಸರೋವರ ಎಂದು ಇಲ್ಲಿ ಜನ ಭಾವಿಸುತ್ತಾರೆ. ಹಾಗಾಗಿ ತಾರ್ಸರ್ ದಡದಲ್ಲಿ ಚಾರಣಿಗರು ಟೆಂಟ್ ಹಾಕುತ್ತಾರೆ. ರಾತ್ರಿ ಕಳೆಯುತ್ತಾರೆ. ಇಲ್ಲಿಯ ನೀರನ್ನು ಕುಡಿಯಲು ಉಪಯೋಗಿಸುತ್ತಾರೆ. ಆದರೆ ಮಾರ್ಸರ್‌ನಲ್ಲಿ ಹಾಗೆ ಮಾಡುವುದಿಲ್ಲ. ಕೇವಲ ನೋಡಿ ಆಸ್ವಾದಿಸಿ ಬರುತ್ತಾರೆ. ಅದರ ನೀರನ್ನು ಕುಡಿಯುವುದಿಲ್ಲ. ಅದು ಅಲ್ಲಿನವರ ನಂಬಿಕೆ.

### ಸೂಕ್ತ ಕಾಲ...

ಎಲ್ಲ ಕಾಲದಲ್ಲೂ ತಾರ್ಸರ್ ಮಾರ್ಸರ್ ಸರೋವರದ ಟ್ರೆಕ್ಕಿಂಗ್ ಮಾಡಲು ಸಾಧ್ಯವಿಲ್ಲ. ಜೂನ್‌ನಿಂದ ಸೆಪ್ಟೆಂಬರ್ ತನಕ ಮಾತ್ರ ಇಲ್ಲಿಗೆ ಹೋಗಬಹುದು. ಉಳಿದ ದಿನಗಳಲ್ಲಿ ಇದು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿರುತ್ತದೆ.



ಮಾರ್ಸರ್ ಸರೋವರ

## ಪುಲ್ವಾಮದ ಸುತ್ತ...

**ಜಮ್ಮು–ಕಾಶ್ಮೀರದಲ್ಲಿರುವ** ಪುಲ್ವಾಮ ಜಿಲ್ಲೆ, ಅದ್ಭುತ ಪ್ರವಾಸಿ ತಾಣಗಳನ್ನು ತನ್ನೊಡಲಲ್ಲಿಟ್ಟುಕೊಂಡಿದೆ. ಇದು ಅಪರೂಪದ ನದಿ-ಝರಿಗಳ ನಾಡು. ಮಂಜು ಸುರಿಯುವ ಬೀಡು. ಐತಿಹಾಸಿಕ ತಾಣಗಳಿರುವ ಪ್ರದೇಶ.

1979ರಲ್ಲಿ ಈ ಜಿಲ್ಲೆ ರಚನೆಯಾಗಿದೆ. ಈ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳಿವೆ. ಸುಂದರ ಕಣಿವೆಯ ಭಾಗವಾಗಿರುವ ಪುಲ್ವಾಮ ಜಿಲ್ಲೆಯಲ್ಲಿ ತಾರ್ಸರ್–ಮಾರ್ಸರ್‌ನಂತಹ ಸರೋವರಗಳು, ದೇವಾಲಯ ಮತ್ತು ಚಾರಣದ ತಾಣಗಳಿವೆ. ಅಂತಹ ಪ್ರಮುಖ ಪ್ರವಾಸಿ ತಾಣಗಳ ಸಂಕ್ಷಿಪ್ತ ವಿವರ ಇಲ್ಲಿದೆ.

### ಅವಂತೀಶ್ವರ ದೇವಾಲಯ

ವಿಷ್ಣು ಮತ್ತು ಶಿವನ ದೇವಾಲಯ. ಈ ದೇವಾಲಯದ ಮೇಲೆ



ಚಿತ್ರ: ಕುರುಂಬುಡೇಲು ರಾಮಕೃಷ್ಣ ಭಟ್ ಬೆಳ್ಳಾರೆ

ಅಪರೂಪದ ಕೆತ್ತನೆಗಳಿವೆ. ಇದು 9ನೇ ಶತಮಾನದಲ್ಲಿ ನಿರ್ಮಾಣವಾದ ದೇವಾಲಯ. ಆಯತಾಕಾರದ ಅಂಗಳ, ನಡುವೆ ಗರ್ಭಗುಡಿ. ಮುಖ್ಯ ದೇವಾಲಯದ 4 ಮೂಲೆಗಳಲ್ಲಿ ನಾಲ್ಕು ಸಣ್ಣ ದೇವಾಲಯಗಳಿವೆ. ತೆರೆದ ಬದಿಗಳಿಂದ ಕೂಡಿದ ಒಂದು ಕಂಬದ ಮಂಟಪವಿದೆ. ಹಿಂದೆ ಈ ದೇವಾಲಯಗಳ ಮೇಲೆ ದಾಳಲಿ ನಡೆದಿರುವ ಕುರುಹುಗಳಿವೆ. ಇದೀಗ ಬರೀ ಅವಶೇಷಗಳಾಗಿ ಉಳಿದಿವೆ.

### ಪೇಯರ್ ಟೆಂಪಲ್

ಇದು ದೇವಾಲಯ. ಪುಲ್ವಾಮ ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ 3 ಕಿಮೀ ದೂರದಲ್ಲಿದೆ. ಪೇಯರ್ ಗ್ರಾಮದಲ್ಲಿ ಈ ದೇವಾಲಯ ಇರುವ ಕಾರಣ ಅದೇ ಹೆಸರಿನಿಂದ ಕರೆಯುತ್ತಾರೆ. ಇದು ಏಕಶಿಲಾ ಕಲ್ಲಿನಿಂದ ಕೆತ್ತಿರುವ ದೇವಸ್ಥಾನ ಎನ್ನುತ್ತಾರೆ. ಸುಮಾರು 10 ನೇ ಶತಮಾನದಲ್ಲಿ ಇದನ್ನು ನಿರ್ಮಿಸಲಾಗಿದೆ ಎಂದು ಅಂದಾಜಿಸಲಾಗಿದೆ.

### ಕೋನ್ಸರ್ ನಾಗ್ ಸರೋವರ

ಕೋನ್ಸರ್ ನಾಗ್ ಸರೋವರವು ಕಾಶ್ಮೀರದ ದಕ್ಷಿಣಕ್ಕೆ ಪಂಜಾಲ್ ಪರ್ವತಗಳ ನಡುವಿದೆ. ಬೇಸಿಗೆಯಲ್ಲೂ ಈ ಸರೋವರ ಹೆಪ್ಪುಗಟ್ಟುತ್ತದಂತೆ. ವಿಶಾವ್‌ಗೆ ಸುಮಾರು 3 ಕಿ.ಮೀ ಉದ್ದದ ಕೋನ್ಸರ್ ಸರೋವರದ ಮೂಲಕ ಹಾದು ಹೋಗುತ್ತದೆ. ಇದು ಬಿಜ್ಬೆರಾ ಕೆಳಗೆ ಝೀಲಂ ಸೇರುತ್ತದೆ. ಇದೊಂದು ಅತಿ ಸುಂದರ ಸರೋವರ.

ಇದೇ ರೀತಿ ತಾರ್ಸರ್ ಮತ್ತು ಮಾರ್ಸರ್ ಸರೋವರಗಳು ಪುಲ್ವಾಮಾ ಜಿಲ್ಲೆಯಲ್ಲಿವೆ.

### ಅಹರ್ಬಾಲ್ ಜಲಪಾತ

ವಿಶಾವ್ ನದಿಯ ನೀರಿನಿಂದ ಸೃಷ್ಟಿಯಾಗುವ ಜಲಪಾತಗಳ ಪೈಕಿ ಇದೂ ಒಂದು. ಜಲಪಾತವು ದಟ್ಟ ಅರಣ್ಯದೊಳಗಿದೆ. ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ



ಚಿತ್ರಕೃಪೆ:ವಿಕಿ ಕಾಮನ್ಸ್

# ಬಲ್ಲಾಳರಾಯ ದುರ್ಗದ ಬೆರಗು

ಕಾಡು–ಕಣಿವೆಗಳ ಹಾದಿಯಲ್ಲಿ ಸಾಗಿ, ಬಲ್ಲಾಳರಾಯನ ದುರ್ಗದ ತುದಿಗೆ ಹೋಗಿ ನಿಂತಾಗ ಮೈ ಹಗುರವಾಗುತ್ತದೆ, ಮನಸ್ಸು ಪ್ರಫುಲ್ಲವಾಗುತ್ತದೆ. ಅಂಥದ್ದೊಂದು ಅನುಭವ ನಿಮ್ಮದಾಗಲು ದುರ್ಗವನ್ನು ಏರಲೇಬೇಕು...

ಶ್ರೀಧರ್ ಎಸ್. ಸಿದ್ದಾಪುರ



**ಏಕ್‌ದಮ್** ಸಾಲು ಸಾಲು ರಜೆಗಳು ಬಂದಿದ್ದರಿಂದ, ಗೆಳೆಯರೆಲ್ಲ ಸೇರಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿರುವ ಬಲ್ಲಾಳರಾಯನ ದುರ್ಗಕ್ಕೆ ಬೈಕ್‌ನಲ್ಲಿ ಪ್ರವಾಸ ಹೊರಡುವ ನಿರ್ಧಾರ ಕೈಗೊಂಡೆವು.

ಕೊಟ್ಟಿಗೆಹಾರದಿಂದ ಪ್ರಯಾಣ ಆರಂಭ. ಬೆಳಕು ಕಣ್ಣು ಬಿಡುವ ಮುನ್ನ ಬೈಕ್ ಏರಿ, ಅದರ ಕಿವಿ ಹಿಂಡುತ್ತಾ, ಕಾಫಿ ಕಾಡಿನ ತಿರುವುಗಳಲ್ಲಿ ಸಾಗಿದೆವು. ಹಿಂದಿನ ದಿನ ಬಿದ್ದ ಮಳೆಯ ಘಮಲು ಮುಖವನ್ನು ಸವರುತ್ತಿತ್ತು. ಕುದುರೆಮುಖ ಬೆಟ್ಟಗಳನ್ನು ಹಿಂದಿಕ್ಕಿ ಬಲಕ್ಕೆ ತಿರುಗಿ, ಕಡಿದಾದ ಗುಡ್ಡದ ಕಡೆ ಹೊರಟಾಗ ತ್ರಿಪಾಠಿ ಎಸ್ಟೇಟ್‌ನ ಮ್ಯಾನೇಜರ್ ಬಂಗೇರಾ ಅವರು ಎದುರಾದರು. ಅವರಿಂದ ಕೋಟೆಯ ಇತಿಹಾಸ ಕಥೆ ಕೇಳುತ್ತಾ, ನಿಸರ್ಗದ ನಡುವೆ ಸೆಲ್ಫಿ ತೆಗೆದುಕೊಳ್ಳುತ್ತಾ ತಲ್ಲೀನರಾದೆವು.

ನಾವು ನಿಂತ ಸ್ಥಳ ಹೇಗಿತ್ತೆಂದರೆ, ಹತ್ತು ಹೆಜ್ಜೆ ಮುಂದಿಟ್ಟರೆ ಕಡಿದಾದ ಪ್ರಪಾತ. ಮುಂದಕ್ಕೆ ದಕ್ಷಿಣ ಕನ್ನಡ. ಆದರೆ ನಾವಿದ್ದಿದ್ದು ಚಿಕ್ಕಮಗಳೂರು ಜಿಲ್ಲೆಯಲ್ಲಿ. ಅಲ್ಲೇ ನಿಂತು ಕಣ್ಣು ಹಾಯಿಸಿದರೆ ದೂರದಲ್ಲಿ ಜಮಾಲಾಬಾದ್ ಕೋಟೆ ಮಂಜಿನೊಂದಿಗೆ ಮುದ್ದಾಡಿದಂತೆ ಕಾಣುತ್ತಿದೆ.

ನಮ್ಮ ಎಡಕ್ಕೆ ಕಾಲ್ನಡಿಗೆಯಲ್ಲಿ ಧರ್ಮಸ್ಥಳಕ್ಕೆ ಹೋಗುವ 8 ಕಿ. ಮೀ. ನ ಕಾಲುಹಾದಿ. ಎಡ ದಿಕ್ಕಿನಲ್ಲಿ ಹೊರಟರೆ ಮತ್ತೊಂದು ಸ್ವರ್ಗ ಶಿಖರ. ಅದರ ನಡುವಿರುವ ಸೀಳಿದ ದಾರಿಯಲ್ಲಿ ನಡೆದರೆ ಬಲ್ಲಾಳರಾಯನ ಕೋಟೆ ದಾರಿ ಬಿಡಿಸಿಕೊಳ್ಳುತ್ತಾ ಹೋಗುತ್ತದೆ.

ಪ್ರವಾಸದ ಮೊದಲ ಅರ್ಧ ಗಂಟೆ ಕಾಡಿನ ಏರು ದಾರಿ. ಕಚ್ಚಿಕೊಳ್ಳುವ ಜಿಗಣೆಗಳ ಕಾಟ. ಅವು ಯಾರಿಗೆ ಕಡಿಮೆ ಕಚ್ಚುತ್ತವೋ ಎಂಬ ಪೈಪೋಟಿಯಲ್ಲೇ ಕಾಡು ದಾಟಿದೆವು. ಜಾರುವ ಅಂಟು ಮಣ್ಣಿನ ಏರು ದಾರಿಯಲ್ಲಿ ಹೆಜ್ಜೆ ಮೇಲೆ ಹೆಜ್ಜೆ, ಭರತನಾಟ್ಯ. ಎಡಕ್ಕೆ ಮಹಾ ಪ್ರಪಾತ. ಹಸಿರು ವೆಲ್ವೆಟ್ ಬಟ್ಟೆಯನ್ನು ಹೊದ್ದಂತೆ ಕಾಣುವ ಬೆಟ್ಟದ ಸಾಲುಗಳು. ಇಕ್ಕೆಲಗಳಲ್ಲಿ ಹಸಿರ ರಾಶಿಯ ನಡುವಿನ ಹಾದಿಯಲ್ಲಿ ಸಾಗುತ್ತಿದ್ದರೆ ಮೋಡಗಳು ತಮ್ಮ ಬಾಹುಗಳಲ್ಲಿ ಶಿಖರಗಳನ್ನು ಹಿಡಿದು ಮುದ್ದಿಸುತ್ತಾ, ಒಮ್ಮೆಲೆ ಬಿಟ್ಟು ಬಿಡುವಂತೆ ಭಾಸವಾಗುತ್ತಿತ್ತು. ನಂತರ ಚಕ್ಕನೆ ಕಣ್ಣೆದುರು ಬಂದು ಆಶ್ಚರ್ಯ ಮೂಡಿಸಿ ಮತ್ತೆ ಮಂಜಿನೊಂದಿಗೆ ಸರಸಕ್ಕಿಳಿಯುತ್ತಿದ್ದವು. ನಾವು ಹೋದಲ್ಲೆಲ್ಲ ನಮ್ಮ ಬೆನ್ನಟ್ಟಿ ಬರುತ್ತಿದ್ದವು ಮೋಡಗಳು. ಸ್ವಲ್ಪ ಹೊತ್ತು ಕಳೆಯುವುದರಲ್ಲಿ ನಾವು ಬಲ್ಲಾಳರಾಯ ದುರ್ಗದ ನೆತ್ತಿಯ ಮೇಲಿದ್ದವು.

### ಹೋಗುವುದು ಹೇಗೆ ?

ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗಡಿಭಾಗದಲ್ಲಿದೆ ಬಲ್ಲಾಳರಾಯನ ದುರ್ಗ. ಬೆಂಗಳೂರು ಕಡೆಯಿಂದ ಹೋಗುವವರು ಚಿಕ್ಕಮಗಳೂರು – ಮೂಡಿಗೆರೆ ಮೂಲಕ ಕೊಟ್ಟಿಗೆಹಾರ ತಲುಪಬಹುದು. ಸಕಲೇಶಪುರದ ಕಡೆಯಿಂದಲೂ ಕೊಟ್ಟಿಗೆಹಾರಕ್ಕೆ ಬರಲು ದಾರಿ ಇದೆ.

ಕೊಟ್ಟಿಗೆಹಾರದಿಂದ ಕಳಸಕ್ಕೆ ಸಾಗುವ ಮಾರ್ಗದಲ್ಲಿ ಸುಂಕಸಾಲೆ ಗ್ರಾಮವಿದೆ. ಇಲ್ಲಿಗೆ ಸಮೀಪದಲ್ಲಿ ಎಡಕ್ಕೆ ರಸ್ತೆ ಇದೆ. ಆ ರಸ್ತೆಗುಂಟ ಸಾಗಿದರೆ ಬಲ್ಲಾಳರಾಯನ ದುರ್ಗ ತಲುಪಬಹುದು. ಇಲ್ಲಿಂದ ಕೋಟೆ ಮೂರು ಕಿ.ಮೀ ದೂರವಿದೆ.



### ನಡಿಗೆ, ಬೈಕ್ ದಾರಿ

ಸುಂಕಸಾಲೆ ಗ್ರಾಮದಿಂದ ಬೆಟ್ಟಸಾಲುಗಳ ನಡುವೆ ಕೋಟೆ ತಲುಪಬಹುದು. ಇಲ್ಲಿಂದ ಬಸ್ ವ್ಯವಸ್ಥೆ ಇಲ್ಲ. ಹಾಗಾಗಿ ನಡೆದೇ ಹೋಗಬೇಕು. ಇಲ್ಲವೇ, ಬೈಕ್ ಅಥವಾ ಖಾಸಗಿ ವಾಹನಗಳಲ್ಲಿ ಹೋಗಬಹುದು.

ಇದೊಂದು ಅರಣ್ಯ ಸೂಕ್ಷ್ಮ ಪ್ರದೇಶ. ಇಲ್ಲಿ ಪ್ಲಾಸ್ಟಿಕ್ ಸೇರಿದಂತೆ ಯಾವುದೇ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯದೇ ಸ್ವಚ್ಛತೆ ಕಾಪಾಡುವುದು ಪ್ರವಾಸಿಗರ ಜವಾಬ್ದಾರಿ.

### ಅದ್ಭುತ ಕೋಟೆ ಇದು

ಮೂಡಿಗೆರೆ ತಾಲೂಕಿನ ಸುಂಕಸಾಲೆ ಗ್ರಾಮದಲ್ಲಿರುವ ಬಲ್ಲಾಳರಾಯನದುರ್ಗ. ಇಲ್ಲಿ ಹೊಯ್ಸಳರ ರಾಜ ಬಲ್ಲಾಳರಾಯ ಎಂಬ ದೊರೆ ಕೋಟೆ ನಿರ್ಮಿಸಿರುವುದರಿಂದ ಬಲ್ಲಾಳರಾಯನದುರ್ಗ ಎಂಬ ಹೆಸರು ಬಂದಿದೆ.

ಈ ಕೋಟೆಯ ನೆತ್ತಿಯ ಮೂರು ನಾಲ್ಕು ಕಡೆ ಕಾವಲು ಬುರುಜಿದೆ. ದಕ್ಷಿಣ ಕನ್ನಡದ ಕಡೆಗೆ ತೀರಾ ಕಡಿದಾದ ಪ್ರಪಾತವಿದೆ. ಚಾರ್ಮಾಡಿಯ 'ಏರಿಕಲ್ಲು' ಅಥವಾ 'ಹುಲಿದನ' ಬೆಟ್ಟ, ಕುದುರೆಮುಖ ಶಿಖರ ಇಲ್ಲಿಂದ ನಿಚ್ಚಳವಾಗಿ ಕಾಣುತ್ತದೆ. ಬೆಟ್ಟದ ತುದಿಯಲ್ಲಿ ಗೋಡೆ ನಿರ್ಮಿಸಿದ್ದಾರೆ. ನೆತ್ತಿಯನ್ನು ಸಪಾಟುಗೊಳಿಸಿ ಮನೆಯಂತಹ ರಚನೆಗಳಿವೆ. ಕೆಲ ಪ್ರವಾಸಿಗರು ಎಂದಿನಂತೆ ಆ ಮನೆಗಳಲ್ಲಿ ಪ್ಲಾಸ್ಟಿಕ್ ಶೀಶೆಗಳನ್ನು ಬಿಸಾಡಿ ಹೋಗಿದ್ದಾರೆ. ಅವರ ಪರಿಸರ ಪಜ್ಞೆ ಇನ್ನೂ ಪಾತಾಳದಲ್ಲಿದೆ. ಆದರೆ ಅವರಿಗೆ ಬೆಟ್ಟವೇರುವ ಕನಸು ಮಾತ್ರ ಉತ್ತುಂಗದಲ್ಲಿದೆ !

ಬೆಟ್ಟದ ಕಲ್ಲುಗಳನ್ನೇ ಕೋಟೆಗೆ ಬಳಸಿ, ಬೃಹತ್ ಕಡೆಯುವ ಕಲ್ಲು, ಬೀಸುವ ಕಲ್ಲು ತಯಾರಿಸಿದ್ದಾರೆ. ಅವುಗಳು ಬಲ್ಲಾಳರಾಯನ ಕಾಲದ ಸಾಕ್ಷ್ಯವಾಗಿ ಇನ್ನೂ ನಿಂತಿವೆ. ಶಿವನ ಬಾಗಿಲೆಂಬ ಶಿಲೆಯ ಮಹಾದ್ವಾರ ನೆತ್ತಿಯ ಸ್ವಲ್ಪ ಕೆಳಗಿನ ಕಾಡುಗಳಲ್ಲಿ ಅನಾಥವಾಗಿ ಬಿದ್ದಿವೆ. ಬಾಗಿಲು ಮಾಡುವಷ್ಟು ದೊಡ್ಡ ಬಂಡೆ ಸುತ್ತಲ್ಲೆಲ್ಲೂ ಇಲ್ಲ. ಕೆಳಗಿನ ಕಣಿವೆಯಿಂದ ಕ್ರೇನು, ಟ್ರಕ್ಕುಗಳಿಲ್ಲದ ಕಾಲದಲ್ಲಿ ಹೊತ್ತುಕೊಂಡೇ ಬರಬೇಕು. ಅಂಥ ಬೃಹತ್ ಬಾಗಿಲು ಅದು. ಅದನ್ನು ಕಂಡು ನಮ್ಮ ಹಿರಿಯರ ಪರಿಶ್ರಮಕ್ಕೆ ಮನದಲ್ಲೇ ನಮಸ್ಕರಿಸಿದೆ.

ಒಂದು ಬುರುಜಿನಿಂದ ಮತ್ತೊಂದಕ್ಕೆ ದಾಟಲು ಕನಿಷ್ಠ ಅರ್ಧ ಗಂಟೆ ಬೇಕು. ಅಷ್ಟೂ ಉದ್ದಕ್ಕೂ ಕಲ್ಲಿನ ಪಾಗಾರ ಕಟ್ಟಿದ್ದಾರೆ. ಬಂಡಾಜೆ ಅಬ್ಬಿ, ಸುಂಕಸಾಲೆ ಅಬ್ಬಿ ಇಲ್ಲಿಂದ ಬಹಳ ಸನಿಹದಲ್ಲಿದೆ. 360 ಡಿಗ್ರಿ ಕೋನದಲ್ಲೂ ಎತ್ತ ನೋಡಿದರು ಬೆಟ್ಟಗಳ ರಾಶಿ.

ಬಲ್ಲಾಳರಾಯನ ದುರ್ಗ ನೋಡಿ ಬಂದು ತಿಂಗಳಾದರೂ ಮನದ ತುಂಬಾ ಆ ಕೋಟೆಯ ನೆನಪುಗಳ ತೋರಣ ಕಟ್ಟಿಕೊಂಡಿತು. ಮನಸ್ಸು ಮತ್ತೊಮ್ಮೆ ಅಲ್ಲಿ ಲಗ್ಗೆ ಇಡಲು ಕಾತುರವಾಗಿದೆ! ನೀವೂ ಬರುವಿರಾ?

(ಚಿತ್ರಗಳು: ಲೇಖಕರವು)